# ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

## Bangalore Mysore Infrastructure Corridor Area Planning Authority

ನಂ. 5, 2ನೇ ಮಹಡಿ, ಲೂಪ್‌ಲೇನ್,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 009.
ಫೋನ್ : 080 22341230

No. 5, Second Floor,
Looplane, Race Course Road, Bengaluru - 560 009
Tel : 080 22341230


ಸಂಖ್ಯೆ: ಬಿಎಂಐಸಿಎಪಿಎ/ವಿನ್ಯಾಸ/21/2014-15

ದಿನಾಂಕ: 23 FEB 2016

## ವಸತಿ ವಿನ್ಯಾಸ ಪ್ರಾರಂಭಿಕ ಪ್ರಮಾಣ ಪತ್ರ

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2)ರಡಿಯಲ್ಲಿ)**

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿಮನವರ್ತೆ ಕಾವಲ್ ಗ್ರಾಮದ ಸ.ನಂ:19/2ರ 05ಎ-09ಗು, 20/1ರ 02ಎಕರೆ, 20/2ರ 05ಎ-21ಗು ಮತ್ತು 20/4ರ 0ಎ-23ಗು ಒಟ್ಟು 13ಎ-13ಗು (18ಗುಂಟೆ 'ಬಿ' ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಮಂಜೂರಾತಿ ಕೋರಿರುವ ಕುರಿತು.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ:23.09.2015
2. ದಿನಾಂಕ:10.06.2015 ರಂದು ಜರುಗಿದ ಪ್ರಾಧಿಕಾರದ 45ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ 45.5.5ರ ತೀರ್ಮಾನ.
3. ಯೂನಿಯನ್ ಬ್ಯಾಂಕ್, ಗಾಂಧಿ ನಗರ, ಬೆಂಗಳೂರು ಇಲ್ಲಿ ಪಡೆದ ಬೇಡಿಕೆ ಹುಂಡಿ ಸಂಖ್ಯೆ:217522, ದಿನಾಂಕ: 29.06.2015, ರೂ.39,80,825/-.
4. ಈ ಕಛೇರಿಯ ಸಮಸಂಖ್ಯೆ ಪತ್ರದ ದಿನಾಂಕ:10.07.2015.
5. ಅರ್ಜಿದಾರರ ಮನವಿ ದಿನಾಂಕ: 11.09.2015.
6. ಈ ಕಛೇರಿಯ ಸಮಸಂಖ್ಯೆ ಪತ್ರದ ದಿನಾಂಕ:17.11.2015.
7. ಅರ್ಜಿದಾರರ ಮನವಿ ದಿನಾಂಕ: 12.02.2016.

* * * * *

**ಪ್ರಸ್ತಾವನೆ:-**

ಶ್ರೀ ವೈ.ಶಿವರಾಮಕೃಷ್ಣ, ಅಧಿಕೃತ ಸಹಿಗಾರರು, ಮೆ॥ ಬಾಲಾಜಿ ರಿಯಲೇಟರ್ಸ್ ಪ್ರೈ.ಲಿ., ಮತ್ತು ಶ್ರೀ ಎ.ಎಸ್.ಜಯಸಿಂಹ, ನಂ:02, ಫರಾ ಪ್ಲಾಜಾ, ಇನ್‌ಫೆಂಟ್ರಿ ರೋಡ್, ಬೆಂಗಳೂರು ಇವರು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿಮನವರ್ತೆ ಕಾವಲ್ ಗ್ರಾಮದ ಸ.ನಂ:19/2ರ 05ಎ-09ಗು, 20/1ರ 02ಎಕರೆ, 20/2ರ 05ಎ-21ಗು ಮತ್ತು 20/4ರ 0ಎ-23ಗು ಒಟ್ಟು 13ಎ-13ಗು (18ಗುಂಟೆ 'ಬಿ' ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನಿನಲ್ಲಿ ವಸತಿ ಅನುಮೋದನೆ ನೀಡಲು ಉಲ್ಲೇಖ(1)ರ ಮನವಿಯಲ್ಲಿ ಪ್ರಾಧಿಕಾರವನ್ನು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ಭಾಗಶಃ ವಾಣಿಜ್ಯ, ಭಾಗಶಃ ವಸತಿ ಹಾಗೂ ಸ್ವಲ್ಪ ಭಾಗ ಉದ್ಯಾನವನ ಮತ್ತು ಬಯಲುಜಾಗ ವಲಯದಲ್ಲಿ ಕಾಯ್ದಿರಿಸಲಾಗಿದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರು ವಿವಿಧ ಅಧಿಕೃತ ಜ್ಞಾಪನ ಪತ್ರಗಳಲ್ಲಿ ಪ್ರತ್ಯೇಕ ನಾಲ್ಕು ಪ್ರಕರಣಗಳಲ್ಲಿ ಪ್ರಸ್ತಾಪಿತ ಸ.ನಂ:19/2ರ 05ಎ-12ಗು, 20/1ರ 02ಎಕರೆ, 20/2ರ 05ಎ-21ಗು ಮತ್ತು 20/4(ಹಳೆ ಸಂಖ್ಯೆ: 20/1)ರ 0ಎ-23ಗುಂಟೆ ವಿಸ್ತೀರ್ಣದ ಜಮೀನುಗಳನ್ನು ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಆದೇಶ ಸಂಖ್ಯೆ ಎಲ್ಎನ್ಎ(ಎಸ್)ಸಿಆರ್/32/14-15, ದಿನಾಂಕ:13.04.2015ರಲ್ಲಿ ಸರ್ವೆ ಸಂಖ್ಯೆ:19/2ರಲ್ಲಿ 0ಎ-15ಗು ಬಂಡಿ ದಾರಿಯನ್ನು 0ಎ-18ಗುಂಟೆಗೆ ಪಥ ಬದಲಾವಣೆ ಮಾಡಿ ಕರ್ನಾಟಕ ಭೂ ಮಂಜೂರಾತಿ ನಿಯಮ 28(ಎ)(1)ರಡಿ ಆದೇಶ ಹೊರಡಿಸಿರುತ್ತಾರೆ.

ಪ್ರಸ್ತಾವನೆಯನ್ನು ಉಲ್ಲೇಖ(2)ರ ಪ್ರಾಧಿಕಾರದ ತೀರ್ಮಾನದಂತೆ ಅರ್ಜಿದಾರರು ಉಲ್ಲೇಖ(3)ರನ್ವಯ ಅಗತ್ಯ ಶುಲ್ಕಗಳನ್ನು ಪ್ರಾಧಿಕಾರದ ಖಾತೆಗೆ ಪಾವತಿಸಿರುವುದರಿಂದ, ವಿನ್ಯಾಸದಲ್ಲಿನ ರಸ್ತೆ ಜಾಲ, ಉದ್ಯಾನವನ ಮತ್ತು ಸಿಎ ನಿವೇಶನಗಳಿರುವ Demarcation plan ನ್ನು (ನಿವೇಶನಗಳ ವಿಂಗಡಣೆ ಇಲ್ಲದ ನಕ್ಷೆ) ಉಲ್ಲೇಖ(4)ರಲ್ಲಿ ನೀಡಲಾಗಿತ್ತು.

ಉಲ್ಲೇಖ(5)ರಲ್ಲಿ ಅರ್ಜಿದಾರರು ಅನುಮೋದಿತ Demarcation plan ನಕ್ಷೆಯಂತೆ ಭೌತಿಕವಾಗಿ ರಸ್ತೆ, ಉದ್ಯಾನವನ ಮತ್ತು ಬಫರ್ ಹಾಗೂ ಸಿ.ಎ ನಿವೇಶನಗಳನ್ನು ಗುರುತಿಸುವ ಸಂದರ್ಭದಲ್ಲಿ ಗಡಿಭಾಗದಲ್ಲಿ ಕೊಂಚ ಬದಲಾವಣೆಯಾಗಿರುವುದರಿಂದ, ಮಾರ್ಪಾಡಿತ ಕರಡು ವಿನ್ಯಾಸ ನಕ್ಷೆ ನೀಡಲು ಕೋರಿದ ಹಿನ್ನಲೆಯಲ್ಲಿ ಉಲ್ಲೇಖ(6)ರ ಈ ಕಛೇರಿ ಪತ್ರದಲ್ಲಿ ಮಾರ್ಪಾಡಿತ Demarcation Plan ನೀಡಲಾಗಿದೆ.

ಪ್ರಸ್ತಾಪಿತ ಜಮೀನು ಯಾವುದೇ ಭೂಸ್ವಾಧೀನದ ಅಧಿಸೂಚನೆಗಳಲ್ಲಿ ಒಳಗೊಂಡಿಲ್ಲವೆಂದು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ (ಬಿಎಂಐಸಿಪಿ) ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ ರವರು ಮಾಹಿತಿ ನೀಡಿರುತ್ತಾರೆ ಮತ್ತು ಸುತ್ತೋಲೆ ಸಂಖ್ಯೆ:ನಅಇ 08 ಟಿಟಿಪಿ 2013, ದಿನಾಂಕ:24.05.2014ರಂತೆ ವಿನ್ಯಾಸದಲ್ಲಿನ ಸಾರ್ವಜನಿಕ ಉಪಯೋಗ ಜಾಗಗಳಾದ ಉದ್ಯಾನವನ, ಬಯಲು ಜಾಗ, ನಾಗರೀಕ ಸೌಲಭ್ಯದ ನಿವೇಶನ ಮತ್ತು ರಸ್ತೆಗಳನ್ನು ಜಂಟಿ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿ ನಗರ, ಬೆಂಗಳೂರು ಇವರಿಗೆ ಹಕ್ಕುಬಿಟ್ಟಿಯಾಗಿ ಪರಿತ್ಯಜನಾ ಪತ್ರದ ಮೂಲಕ ದಿನಾಂಕ:04.01.2016 ಮತ್ತು 11.02.2016ರಂದು ನೋಂದಣಿ ಮಾಡಿ ಹಸ್ತಾಂತರಿಸಿರುತ್ತಾರೆ.

ನೊಂದಾಯಿತ ಪರಿತ್ಯಜನಾ ಪತ್ರದ ಮುಖೇನಾ ಹಸ್ತಾಂತರಿಸಿರುವ ಜಾಗದ ವಿವರಗಳು ಈ ಕೆಳಕಂಡಂತಿದೆ.

| ಕ್ರಸಂ. | ಭೂ ಉಪಯೋಗ | ಹಸ್ತಾಂತರಿಸಲಾದ ವಿಸ್ತೀರ್ಣ (ಚ.ಮೀ) |
|---|---|---|
| 1 | ನಾಗರೀಕ ಸೌಲಭ್ಯ | 2708.09 |
| 2 | ಉದ್ಯಾನವನ | 5398.22 |
| 3 | ರಸ್ತೆ | 17875.33 |

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರದ ಅನುಮೋದಿತ ವಲಯ ನಿಯಮಾವಳಿಗಳನ್ವಯ ಈ ವಿನ್ಯಾಸದಲ್ಲಿ ವಸತಿಗೆ 26,389.17ಚ.ಮೀ.(ಶೇ.48.94), ವಾಣಿಜ್ಯಕ್ಕಾಗಿ 1552.80ಚ.ಮೀ (ಶೇ.2.88), ನಾಗರೀಕ ಸೌಲಭ್ಯಕ್ಕಾಗಿ 2708.09ಚ.ಮೀ.(ಶೇ.05.02), ಉದ್ಯಾನವನಕ್ಕಾಗಿ 5398.22ಚ.ಮೀ. (ಶೇ.10.01) ಹಾಗೂ ರಸ್ತೆಗಾಗಿ 17875.33ಚ.ಮೀ. (ಶೇ.33.15) ಕ್ಷೇತ್ರದ ಪ್ರದೇಶವನ್ನು ನಿಗದಿಪಡಿಸಲಾಗಿದೆ. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಾಗೂ ದಿನಾಂಕ:10.06.2015

ರಂದು ಜರುಗಿದ ಪ್ರಾಧಿಕಾರದ 45ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ 45.5.5ರ ಮೇರೆಗೆ ವಿನ್ಯಾಸ ಅನುಮೋದನೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವ ಸಂಬಂಧ ಈ ಕೆಳಗಿನ ಆದೇಶ ಹೊರಡಿಸಲಾಗಿದೆ.

**ಆದೇಶ ಸಂ:ಬಿಎಂಐಸಿಎಪಿಎ/ವಿನ್ಯಾಸ/21/2014-15 ದಿನಾಂಕ:** 23 FEB 2016

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿಮನವರ್ತೆ ಕಾವಲ್ ಗ್ರಾಮದ ಸ.ನಂ:19/2ರ 05ಎ-09ಗು, 20/1ರ 02ಎಕರೆ, 20/2ರ 05ಎ-21ಗು ಮತ್ತು 20/4ರ 0ಎ-23ಗು ಒಟ್ಟು 13ಎ-13ಗು (18ಗುಂಟೆ 'ಬಿ' ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ17(2)ರನ್ವಯ ವಸತಿ ಉದ್ದೇಶದ ವಿನ್ಯಾಸಕ್ಕೆ ಅನುಮೋದನೆ ನೀಡಿ, ಶೇ.40ರಂತೆ ಈ ಕೆಳಗೆ ನಮೂದಿಸಿದ ಒಟ್ಟು 43ನಿವೇಶನಗಳನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, ಕಾರ್ಯರೂಪಕ್ಕೆ ತರಲು ಅನುಮೋದನೆ ನೀಡಿ ಬಿಡುಗಡೆಗೊಳಿಸಿದೆ.

| | Site Dimension (mts) | Proposed Site Nos for Release @40% | Total Nos. |
|---|---|---|---|
| 1 | 12.19 m x 18.29 m | 4, 5, 6, 11, 12, 15, 16, 17, 18, 22, 24, 25, 26, 33, 34, 36, 48, 49, 52, 53, 54, 67, 71, 72, 73, 74, 75, 87, 88, 95, 103, 106 & 107 | 33 (ಮುವತ್ತಮೂರು) |
| 2 | Commercial | 44 | 01 (ಒಂದು) |
| 3 | Odd Sites | 1, 2, 27, 31, 69, 81, 82, 98 & 102 | 9 (ಒಂಬತ್ತು) |
| | Total | | 43 (ನಲವತ್ತಮೂರು) |

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನಾಂಕದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ಕನಿಷ್ಠ 3(ಮೂರು) ತಿಂಗಳು ಮೊದಲೇ ನವೀಕರಿಸಿಕೊಳ್ಳತಕ್ಕದ್ದು.
2. ವಿನ್ಯಾಸದ ಅಭಿವೃದ್ಧಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿ ನಗರ ವಲಯ, ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಿ ಸಿವಿಲ್ ಕಾಮಗಾರಿ, ವಿದ್ಯುತ್ ಸೌಲಭ್ಯ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ಉದ್ಯಾನವನ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಯ್ದೆಯನ್ವಯ ಮತ್ತು ಸರ್ಕಾರದ ನಿರ್ದೇಶನಗಳನ್ವಯ ಲೋಕೋಪಯೋಗಿ ಇಲಾಖೆಯ ಚಾಲ್ತಿಯಲ್ಲಿರುವ ದರಪಟ್ಟಿಯಂತೆ ವಿವರವಾದ ಅಂದಾಜು ಪಟ್ಟಿಯ ಆಧಾರದ ಮೇಲೆ ನಿಗದಿಪಡಿಸಿ ಅಭಿವೃದ್ಧಿ ಶುಲ್ಕವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿ ನಗರ ವಲಯ, ಬೆಂಗಳೂರು ಇಲ್ಲಿಗೆ ಪಾವತಿಸತಕ್ಕದ್ದು.
3. ಸಿವಿಲ್ ಕಾಮಗಾರಿಗಳಾದ ರಸ್ತೆ, ಸಿಡಿ ವರ್ಕ್ಸ್, ರಸ್ತೆಯ ಪಕ್ಕದ ಡ್ರೈನ್, ಒಳಚರಂಡಿ ಕಾಮಗಾರಿ, ನೀರು ಸರಬರಾಜು ಕಾಮಗಾರಿಗಳನ್ನು (ಪೈಪ್‌ಲೈನ್‌ಗಳನ್ನು ಒಳಗೊಂಡಂತೆ) ಪೂರ್ಣಗೊಳಿಸಿದ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಸಂಬಂಧಿತ ಸ್ಥಳೀಯ ಸಂಸ್ಥೆಯ

ಮತ್ತು ಕಾರ್ಯನಿರ್ವಹಣಾ ಅಧಿಕಾರಿಗಳು ತಮ್ಮ ಕಛೇರಿಯ ಇಂಜಿನಿಯರಿಂಗ್ ಶಾಖೆಯಿಂದ ದೃಢೀಕರಿಸಿಕೊಂಡು ಸದರಿ ಹಂತದ ಕಾಮಗಾರಿಗಳನ್ನು ತೃಪ್ತಿಕರವಾಗಿ ಕೈಗೊಂಡಿರುವ ಬಗ್ಗೆ ಅಗತ್ಯ ಪ್ರಮಾಣ ಪತ್ರದೊಂದಿಗೆ ಹಾಗೂ ಮೊದಲನೇ ಹಂತದಲ್ಲಿ ಬಿಡುಗಡೆ ಮಾಡಿಸಿಕೊಂಡಿರುವ ಶೇ.40ರಷ್ಟು ನಿವೇಶನಗಳನ್ನು ಮಾತ್ರ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ಹೊಂದಿರುವ ಬಗ್ಗೆ ಪೂರಕ ದಾಖಲಾತಿ ಸಮೇತ ಎರಡನೇ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿ ಮನವಿ ಸಲ್ಲಿಸತಕ್ಕದ್ದು.

4. ವಿನ್ಯಾಸದಲ್ಲಿ ಅಗತ್ಯ ಮೂಲ ಸೌಕರ್ಯಗಳಾದ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಹಾಗೂ ರಸ್ತೆಗಳ ಡಾಂಬರೀಕರಣ ಸೇರಿದಂತೆ ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರ 3ನೇ ಹಂತದ ಶೇ.30 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲಾಗುವುದು.
5. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಟ ಬಳಕೆಗೆ ಮಾತ್ರ ಅಭಿವೃದ್ಧಿಪಡಿಸತಕ್ಕದ್ದು, ಬದಲಾವಣೆ ಪ್ರಸ್ತಾಪಿಸಿದಲ್ಲಿ ಚಾಲ್ತಿಯಲ್ಲಿರುವ ಶುಲ್ಕ ಹಾಗೂ ನಿಯಮಗಳು ಅನ್ವಯವಾಗುತ್ತವೆ.
6. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಇಕ್ಕೆಲಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
7. ಈ ಅನುಮೋದನೆಯು ಕೆ.ಐ.ಎ.ಡಿ.ಬಿ ಇವರು ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ, ನೀಡಿರುವ ನಿರಾಕ್ಷೇಪಣಾ ಪತ್ರಕ್ಕೆ ಅನುಗುಣವಾಗಿ ನೀಡಲಾಗಿರುತ್ತದೆ. ಪ್ರಸ್ತಾಪಿತ ವಸತಿ ವಿನ್ಯಾಸದ ಜಮೀನು ಬಿ.ಎಂ.ಐ.ಸಿ. ಯೋಜನೆ ಮತ್ತು ಇತರೆ ಯೋಜನೆಗೆ ಭೂ ಸ್ವಾಧೀನಕ್ಕೆ ಸೇರಿದ್ದಲ್ಲಿ ಅಂತಹ ವಿಸ್ತೀರ್ಣವನ್ನು ಅರ್ಜಿದಾರರು ಯಾವುದೇ ತಂಟೆತಕರಾರು ಇಲ್ಲದೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರಕ್ಕೆ ಬಿಟ್ಟುಕೊಡತಕ್ಕದ್ದು, ತದನಂತರ ವಿನ್ಯಾಸ ನಕ್ಷೆಗೆ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
8. ಅನುಮೋದಿತ ವಿನ್ಯಾಸದಲ್ಲಿ ಮಳೆ ನೀರು ಕೊಯ್ಲುಗಾಗಿ ಮತ್ತು ಅಂತರ್‌ಜಲವೃದ್ಧಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
9. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
10. ಈ ಅನುಮೋದನೆಯನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 17(2)ರಡಿಯಲ್ಲಿ ನೀಡಿರುವುದರಿಂದ, ಈ ಅನುಮೋದನೆಯನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಂಬಂಧ ಉಪಯೋಗಿಸಲು ಬರುವುದಿಲ್ಲ.
11. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
12. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರವು ಯಾವುದೇ ಪೂರ್ವ ಸೂಚನೆಯು ಇಲ್ಲದೇ ತಂತಾನೇ ರದ್ದುಗೊಳ್ಳುತ್ತದೆ.
13. ಸರ್ಕಾರಿ ಖರಾಬು ಇದ್ದಲ್ಲಿ, ಸದರಿ ಪ್ರದೇಶವನ್ನು ಒತ್ತುವರಿ ಮಾಡದೆ ಹಾಗೇ ಮೀಸಲಿರಿಸಿ ಸಂರಕ್ಷಿಸತಕ್ಕದ್ದು.
14. ಸ್ಥಳೀಯ ಸಂಸ್ಥೆಗಳು ವಿಧಿಸುವ ಷರತ್ತುಗಳನ್ನು ಪಾಲಿಸತಕ್ಕದ್ದು.
15. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

16. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಯಾವ ಪೂರ್ವ ಸೂಚನೆಯೂ ಇಲ್ಲದೆ ಕೂಡಲೇ ರದ್ದಾಗುವುದು ಹಾಗೂ ಕೆಟಿಸಿಪಿ ಕಾಯ್ದೆ, 1961ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ಪ್ರತಿಯನ್ನು:-

1) ಜಂಟಿ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿ ನಗರ, ಬೆಂಗಳೂರು ಇವರಿಗೆ ಅನುಮೋದಿತ ನಕ್ಷೆಯ 3 ಪ್ರತಿಗಳೊಂದಿಗೆ ಕಳುಹಿಸುತ್ತಾ, ಕಾಮಗಾರಿಗಳು ಪ್ರಗತಿಯಲ್ಲಿರುವ ಬಗ್ಗೆ ಆಗಿಂದಾಗ್ಗೆ ಪರಿಶೀಲಿಸಲು ಕೋರಲಾಗಿದೆ.
2) ಹಿರಿಯ ಉಪ ನೋಂದಣಾಧಿಕಾರಿ, ಜಯನಗರ (ಕೆಂಗೇರಿ), ಬೆಂಗಳೂರು ಇವರಿಗೆ ಅನುಮೋದಿತ ವಸತಿ ವಿನ್ಯಾಸದ ಆದೇಶದಲ್ಲಿ ನಮೂದಿಸಿರುವ ವಿವಿಧ ಅಳತೆಯ 43 ನಿವೇಶನಗಳನ್ನು ಬಿಡುಗಡೆಗೊಳಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
4) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಜಮೀನಿನ ಮಾಲೀಕತ್ವ, ಅಳತೆ ಮತ್ತು ಖರಾಬು ಇದ್ದಲ್ಲಿ ಅವುಗಳನ್ನು ಪರಿಶೀಲಿಸಿ ದೃಢೀಕರಿಸಿಕೊಳ್ಳಲು ಹಾಗೂ ಅನುಮೋದಿತ ನಕ್ಷೆಯಲ್ಲಿ ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದಾದರೂ ನ್ಯೂನ್ಯತೆಗಳು ಕಂಡು ಬಂದಲ್ಲಿ ಈ ಪ್ರಾರಂಭಿಕ ಪ್ರಮಾಣ ಪತ್ರವು ತಲುಪಿದ 15 ದಿನಗಳೊಳಗಾಗಿ ಸದರೀ ಮಾಹಿತಿಯನ್ನು ನೀಡಲು ಕೋರಲಾಗಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ, ಬೆಂಗಳೂರು ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.
7) ಶ್ರೀ ವೈ.ಶಿವರಾಮಕೃಷ್ಣ, ಅಧಿಕೃತ ಸಹಿಗಾರರು, ಮೆ॥ ಬಾಲಾಜಿ ರಿಯಲ್‌ಟರ್ಸ್ ಪ್ರೈ.ಲಿ., ಮತ್ತು ಶ್ರೀ ಎ.ಎಸ್.ಜಯಸಿಂಹ, ನಂ:02, ಫರಾ ಪ್ಲಾಜಾ, ಇನ್‌ಫೆಂಟ್ರಿ ರೋಡ್, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
8) ಕಛೇರಿ ಪ್ರತಿ.

ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
**Bangalore Mysore Infrastructure Corridor Area Planning Authority**

ನಂ. 5, 2ನೇ ಮಹಡಿ, ಲೂಪ್‌ಲೇನ್,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 009.
ಫೋನ್ : 080 22341230

No. 5, Second Floor,
Looplane, Race Course Road, Bengaluru - 560 009
Tel : 080 22341230

ಸಂಖ್ಯೆ: ಬಿಎಂಐಸಿಎಪಿಎ/ವಿನ್ಯಾಸ/21/2014-15

ದಿನಾಂಕ: 23 FEB 2016

ನಮೂನೆ-I

ನಿವೇಶನ ಬಿಡುಗಡೆ ಪ್ರಮಾಣ ಪತ್ರ

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿಮನವರ್ತೆ ಕಾವಲ್ ಗ್ರಾಮದ ಸ.ನಂ:19/2ರ 05ಎ-09ಗು, 20/1ರ 02ಎಕರೆ, 20/2ರ 05ಎ-21ಗು ಮತ್ತು 20/4ರ 0ಎ-23ಗು ಒಟ್ಟು 13ಎ-13ಗು (18ಗುಂಟೆ 'ಬ' ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನಿನಲ್ಲಿ ಅನುಮೋದಿತ ವಸತಿ ವಿನ್ಯಾಸದಲ್ಲಿನ ಮೊದಲನೇ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ದಿನಾಂಕ:10.06.2015ರ ಪ್ರಾಧಿಕಾರದ 45ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:45.5.5ರ ನಿರ್ಣಯ.
2. ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಕರಡು ವಸತಿ ವಿನ್ಯಾಸ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ವಿನ್ಯಾಸ/21/2014-15, ದಿನಾಂಕ:17.11.2015
3. ಅರ್ಜಿದಾರರು ಬರೆದು ಕೊಟ್ಟಿರುವ ನೋಂದಾಯಿತ ಪರಿತ್ಯಜನಾ ಪತ್ರ ದಿನಾಂಕ:04.01.2016 ಮತು 11.02.2016.
4. ಅರ್ಜಿದಾರರು ಶೇ.40ರಷ್ಟು ನಿವೇಶನಗಳ ಬಿಡುಗಡೆಗಾಗಿ ಸಲ್ಲಿಸಿದ ಮನವಿ ದಿನಾಂಕ:12.02.2016.

*****

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿಮನವರ್ತೆ ಕಾವಲ್ ಗ್ರಾಮದ ಸ.ನಂ:19/2ರ 05ಎ-09ಗು, 20/1ರ 02ಎಕರೆ, 20/2ರ 05ಎ-21ಗು ಮತ್ತು 20/4ರ 0ಎ-23ಗು ಒಟ್ಟು 13ಎ-13ಗು (18ಗುಂಟೆ 'ಬ' ಖರಾಬು ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ನಿವೇಶನ ವಿಂಗಡಣೆ ರಹಿತ Demarcation ನಕ್ಷೆಗೆ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/21/ವಿನ್ಯಾಸ/2014-15, ದಿನಾಂಕ:17.11.2015ರಲ್ಲಿ ಅನುಮೋದನೆಯನ್ನು ನೀಡಲಾಗಿದೆ. ಸದರಿ Demarcation ನಕ್ಷೆಯಂತೆ ರಸ್ತೆ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸದ ಪ್ರದೇಶವನ್ನು ಭೂಮಿಯ ಮೇಲೆ ಅಳವಡಿಸಿ, ಸಿಎ ಮತ್ತು ಪಾರ್ಕ್‌ಗಳಿಗೆ ಗಡಿಗಳನ್ನು ಗುರುತಿಸಿ, ಬೇಲಿ ನಿರ್ಮಿಸಲಾಗಿದೆ ಹಾಗೂ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ರಸ್ತೆ, ಸಿಎ ಮತ್ತು ಉದ್ಯಾನವನ ಪ್ರದೇಶಗಳನ್ನು ಅರ್ಜಿದಾರರು ಉಲ್ಲೇಖ(3)ರಲ್ಲಿ ನೋಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ರಾಜರಾಜೇಶ್ವರಿ ನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿ ನಗರ, ಬೆಂಗಳೂರು ಇಲ್ಲಿಗೆ ಹಸ್ತಾಂತರಿಸಿರುತ್ತಾರೆ. ಉಲ್ಲೇಖ(4)ರಲ್ಲಿ ಅರ್ಜಿದಾರರು ಸದರಿ ಅನುಮೋದಿತ Demarcation ನಕ್ಷೆಯಲ್ಲಿ ನಿವೇಶನಗಳ ವಿಂಗಡಣೆ ಮಾಡಿ ಮೊದಲನೇ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

.....2

ಅದರಂತೆ, Demarcation ನಕ್ಷೆಯಲ್ಲಿ ನಿವೇಶನಗಳನ್ನು ವಿಂಗಡಣೆ ಮಾಡಲಾಗಿ ಸದರಿ ವಸತಿ ವಿನ್ಯಾಸದಲ್ಲಿ ಒಟ್ಟು 107 ವಿವಿಧ ನಿವೇಶನಗಳಿರುತ್ತದೆ. ಈ ಪೈಕಿ ಈ ಕೆಳಗೆ ನಮೂದಿಸಿದ ಶೇ.40ರಷ್ಟು ನಿವೇಶನಗಳನ್ನು (43 ನಿವೇಶನಗಳು) ಮೊದಲನೇ ಹಂತದಲ್ಲಿ ಬಿಡುಗಡೆ ಮಾಡಲಾಗಿದೆ.

<u>ಮೊದಲನೇ ಹಂತದ ಶೇ.40ರಷ್ಟು ಒಳಗೊಂಡ ನಿವೇಶನಗಳು</u>

| ಕ್ರಸಂ | ಅಳತೆ (ಮೀಟರ್‌ಗಳಲ್ಲಿ) | ನಿವೇಶನಗಳ ಸಂಖ್ಯೆ | ಒಟ್ಟು |
|---|---|---|---|
| 1 | 12.19 m x 18.29 m | 4, 5, 6, 11, 12, 15, 16, 17, 18, 22, 24, 25, 26, 33, 34, 36, 48, 49, 52, 53, 54, 67, 71, 72, 73, 74, 75, 87, 88, 95, 103, 106 & 107 | 33 (ಮುವತ್ತಮೂರು) |
| 2 | Commercial | 44 | 01 (ಒಂದು) |
| 3 | Odd Sites | 1, 2, 27, 31, 69, 81, 82, 98 & 102 | 9 (ಒಂಭತ್ತು) |
| | | ಒಟ್ಟು | 43 (ನಲವತ್ತಮೂರು) |

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

<u>ಪ್ರತಿಯನ್ನು:</u>

1. ಜಂಟಿ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿ ನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. ಹಿರಿಯ ಉಪ ನೋಂದಣಾಧಿಕಾರಿ, ಜಯನಗರ(ಕೆಂಗೇರಿ), ಬೆಂಗಳೂರು ಇವರಿಗೆ ಅನುಮೋದಿತ ವಸತಿ ವಿನ್ಯಾಸದ ಆದೇಶದಲ್ಲಿ ನಮೂದಿಸಿರುವ ವಿವಿಧ ಅಳತೆಯ 43 ನಿವೇಶನಗಳನ್ನು ಬಿಡುಗಡೆಗೊಳಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಶ್ರೀ ವೈ.ಶಿವರಾಮಕೃಷ್ಣ, ಅಧಿಕೃತ ಸಹಿಗಾರರು, ಮೆ॥ ಬಾಲಾಜಿ ರಿಯಲೇಟರ್ಸ್ ಪ್ರೈ.ಲಿ., ಮತ್ತು ಶ್ರೀ ಎ.ಎಸ್.ಜಯಸಿಂಹ, ನಂ:02, ಫರಾ ಪ್ಲಾಜಾ, ಇನ್‌ಫೆಂಟ್ರಿ ರೋಡ್, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಕಛೇರಿ ಪ್ರತಿ.

23/2

ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.